
Karnataka Board

Mid Term Question Paper



1st PUC
Question Paper

aglasem.com

I ಪಿ.ಯು.ಸಿ ಪ್ರಥಮ ವರ್ಷದ ಅರ್ಧವಾರ್ಷಿಕ ಪರೀಕ್ಷೆ–2022

ಸಮಯ : 3 ಗಂಟೆ 15 ನಿಮಿಷಗಳು | ವಿಷಯ : ಇತಿಹಾಸ (21) | ಅಂಕಗಳು : 100

ಸೂಚನೆಗಳು : 1) ಪ್ರಶ್ನೆಗಳ ಕ್ರಮ ಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.

2) ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳು ''ಭಾಗ–ಡಿ'' ಯಲ್ಲಿ ಭೂಪಟದ ಪ್ರಶ್ನೆಗಳಾದ ಪ್ರಶ್ನೆ ಸಂಖ್ಯೆ 31 ''ಎ'' ಬದಲಿಗೆ ಪ್ರಶ್ನೆ ಸಂಖ್ಯೆ 31''ಬಿ'' ಯನ್ನು ಉತ್ತರಿಸುವುದು.

3) ಪ್ರಶ್ನೆಯ ಸೂಚನೆಗಳನ್ವಯ ಉತ್ತರಿಸಿ.

ಭಾಗ - ಎ

I. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. 10×1=10

1) ಹಿಸ್ಟರಿ ಪದವು ಯಾವ ಭಾಷೆಯಿಂದ ಬಂದಿದೆ ?
2) ದ್ವಿಪಾದ ಚಲನೆ ಎಂದರೇನು ?
3) ವಿಶ್ವದ ಪ್ರಥಮ ಸಾಮ್ರಾಜ್ಞಿ ಯಾರು ?
4) ಜಿಗ್ಗುರಾತ್ ಎಂದರೇನು ?
5) ತಾಪೋ ಸಿದ್ಧಾಂತವನ್ನು ಯಾರು ಪ್ರತಿಪಾದಿಸಿದರು ?
6) ಯುರೋಪಿನ ಅತ್ಯಂತ ಪ್ರಾಚೀನ ನಾಗರಿಕತೆ ಯಾವುದು ?
7) ''ಎನ್–ಎಡಿ–ಎಸಿ'' ಇದು ಯಾರ ಪ್ರಸಿದ್ಧ ಮಾತುಗಳು ?
8) ಕ್ರೈಸ್ತ ಧರ್ಮದ ಚಿಹ್ನೆ ಯಾವುದು ?
9) ಇಸ್ಲಾಂ ಧರ್ಮದ ಸ್ಥಾಪಕ ಯಾರು ?
10) ಮಧ್ಯಕಾಲೀನ ಕ್ರೈಸ್ತಧರ್ಮದ 'ದೈವಿಕ ಭಾಷೆ' ಯಾವುದು ?

ಭಾಗ - ಬಿ

II. ಈ ಕೆಳಗಿನ ಯಾವುದಾದರೂ ಹತ್ತು (10) ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ. 10×2=20

11) ಕಾರ್ಲ್‌ಮಾರ್ಕ್ಸ್‌ನ ಕೃತಿಗಳನ್ನು ಹೆಸರಿಸಿ.
12) ಜೀವದ ಉದಯಕ್ಕೆ ಕಾರಣವಾದ ಎರಡು ರಾಸಾಯನಿಕಗಳು ಯಾವವು ?
13) ನದಿಕಣಿವೆಗಳನ್ನು ನಾಗರಿಕತೆಗಳ ತೊಟ್ಟಿಲು ಎಂದು ಏಕೆ ಕರೆಯಲಾಗಿದೆ ?
14) ಮೆಸೊಪೋಟೇಮಿಯಾವನ್ನು 'ನಾಗರಿಕತೆಗಳ ತೊಟ್ಟಿಲು ಮತ್ತು ಸಮಾಧಿ' ಎಂದು ಏಕೆ ಕರೆಯಲಾಗಿದೆ ?
15) ಚೀನಾದ ಮಹಾಗೋಡೆಯನ್ನು ನಿರ್ಮಿಸಿದವರು ಯಾರು ? ಏಕೆ ?
16) ಪ್ರಾಚೀನ ಗ್ರೀಸಿನ ಯಾವುದಾದರೂ ಎರಡು ನಗರ–ರಾಜ್ಯಗಳನ್ನು ಹೆಸರಿಸಿ.
17) ಪ್ರಾಚೀನ ರೋಮಿನ ಮೊದಲ ಕ್ರಿಮೂರ್ತಿಗಳನ್ನು ಹೆಸರಿಸಿ.
18) ಯೇಸುವಿನ ತಂದೆ–ತಾಯಿಗಳು ಯಾರು ?
19) 'ಇಸ್ಲಾಂ' ಪದದ ಅರ್ಥವೇನು ?
20) ಮಧ್ಯಕಾಲೀನ ಯುರೋಪಿನಲ್ಲಿ ಅಸ್ತಿತ್ವಕ್ಕೆ ಬಂದ ಯಾವುದಾದರೂ ಎರಡು ವಿಶ್ವವಿದ್ಯಾಲಯಗಳನ್ನು ಹೆಸರಿಸಿ.
21) 'ಫ್ಯೂಡಲಿಸಂ' ಎಂಬುದು ಯಾವ ಪದದಿಂದ ಬಂದಿದೆ ? ಅದರ ಅರ್ಥವೇನು ?
22) ರಾಜಕುಮಾರ ಹೆನ್ರಿಯನ್ನು ದಿ ನ್ಯಾವಿಗೇಟರ್ ಎಂದು ಏಕೆ ಕರೆಯುತ್ತಾರೆ ?

ಭಾಗ - ಸಿ

III. ಈ ಕೆಳಗಿನ ಯಾವುದಾದರೂ ಆರು (6) ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15-20 ವಾಕ್ಯಗಳಲ್ಲಿ ಉತ್ತರಿಸಿ. 6×5=30

23) ಇತಿಹಾಸದ ಅಧ್ಯಯನದ ಪ್ರಾಮುಖ್ಯತೆಯನ್ನು ವಿವರಿಸಿ.
24) ಆಧುನಿಕ ಮಾನವ ಉಗಮಿಸಿದ ಸ್ಥಳವನ್ನು ಕುರಿತು ಚರ್ಚಿಸಿ.
25) ನಾಗರಿಕತೆಯನ್ನು ವ್ಯಾಖ್ಯಾನಿಸಿ ಮತ್ತು ನಾಗರಿಕತೆ ಮತ್ತು ಸಂಸ್ಕೃತಿ ನಡುವಿನ ವ್ಯತ್ಯಾಸ ತಿಳಿಸಿ.
26) ಕನ್‌ಫ್ಯೂಸಿಯಸ್ ಮತ್ತು ಅವನ ತತ್ವಶಾಸ್ತ್ರದ ಬಗ್ಗೆ ಒಂದು ವಿವರಣೆ ಬರೆಯಿರಿ.
27) ಪೆರಿಕ್ಲಿಸ್‌ನ ಯುಗವನ್ನು ಸುವರ್ಣಯುಗವೆಂದು ಕರೆಯಲು ಕಾರಣವೇನು ?

(ಪ್ರ.ತಿ.ನೋ)

schools.aglasem.com
aglasem.com

28) ಪ್ರವಾದಿ ಮಹಮ್ಮದರ ಬೋಧನೆಗಳನ್ನು ವಿವರಿಸಿ.

29) ಊಳಿಗಮಾನ್ಯ ವ್ಯವಸ್ಥೆಯ ಪತನಕ್ಕೆ ಕಾರಣಗಳು ಯಾವುವು ?

30) ಪುನರುಜ್ಜೀವನವು ಸಾಹಿತ್ಯಕ್ಕೆ ನೀಡಿದ ಕೊಡುಗೆಗಳೇನು ?

ಭಾಗ - ಡಿ

IV. ಸೂಚನೆಗಳನ್ವಯ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ. 5+5=10

31ಎ) ನಿಮಗೆ ಒದಗಿಸಿರುವ ಪ್ರಪಂಚದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ.

ಎ) ಮೆಕ್ಕಾ ಬಿ) ಬ್ಯಾಬಿಲೋನಿಯಾ ಸಿ) ಆಥೆನ್ಸ್ ಡಿ) ರೋಮ

ಇ) ಜೆರುಸಲೆಂ ಎಫ್) ಅಲೆಗ್ಸಾಂಡ್ರಿಯಾ ಜಿ) ವೆನಿಸ್ ಹೆಚ್) ಕೇಪ್ ಆಫ್ ಗುಡ್ ಹೋಪ್

(ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಮಾತ್ರ)

31ಬಿ) ಕೆಳಗಿನ ಪ್ರಶ್ನೆಯನ್ನು 30-40 ವಾಕ್ಯಗಳಲ್ಲಿ ಉತ್ತರಿಸಿ : 1X10=10

ಗ್ರೀಕರ ಕೊಡುಗೆಗಳನ್ನು ಕುರಿತು ಚರ್ಚಿಸಿ.

-ಅಥವಾ-

ಧಾರ್ಮಿಕ ಸುಧಾರಣೆಯ ಕಾರಣಗಳು ಹಾಗೂ ಪರಿಣಾಮಗಳನ್ನು ವಿವರಿಸಿ.

ಭಾಗ - ಇ

V. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 30-40 ವಾಕ್ಯಗಳಲ್ಲಿ ಉತ್ತರಿಸಿ. 2X10=20

32) ಮಾನವನ ವಿಕಸನಕ್ಕೆ ಕಾರಣವಾದ ಪ್ರಮುಖ ಅಂಶಗಳನ್ನು ಚರ್ಚಿಸಿ.

33) ಈಜಿಪ್ಟ್ ನಾಗರಿಕತೆಯ ಕೊಡುಗೆಗಳನ್ನು ವಿವರಿಸಿ.

34) ಆಗಸ್ಟಸ್ ಸೀಜರ್‌ನ ಜೀವನ ಮತ್ತು ಸಾಧನೆಗಳನ್ನು ವಿವರಿಸಿ.

35) ಭೌಗೋಳಿಕ ಅನ್ವೇಷಣೆಯ ಕಾರಣಗಳು ಹಾಗೂ ಪರಿಣಾಮಗಳನ್ನು ಕುರಿತು ಚರ್ಚಿಸಿ.

ಭಾಗ - ಎಫ್

VI. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. 5X1=5

36) 1) ಅರಿಸ್ಟಾಟಲ್ – ಸಬಲರು ಬದುಕಿ ಉಳಿಯುವ ಸಿದ್ಧಾಂತ

2) ಜವಾಹರಲಾಲ ನೆಹರು – ಡಿವೈನ್ ಕಾಮಿಡಿ

3) ನೆಬುಖಡ್ನೇಜರ್ – ನಡೆದಾಡುವ ವಿಶ್ವವಿದ್ಯಾಲಯ

4) ಚಾರ್ಲ್ಸ್ ಡಾರ್ವಿನ್ – ಡಿಸ್ಕವರಿ ಆಫ್ ಇಂಡಿಯಾ

5) ಡಾಂಟೆ – ತೂಗಾಡುವ ಉದ್ಯಾನ

37) ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. 5X1=5

1) ಹಿಜಿರಾ ಶಕೆ

2) ಯೇಸುವಿನ ಜನನ

3) ಭೂಮಿಯ ಉಗಮ

4) ನೆರಳಿನ ಗಡಿಯಾರ

5) ಒಲಂಪಿಕ್ಸ್ ಕ್ರೀಡೆಗಳ ಆರಂಭ

schools.aglasem.com
AglaSem Earn while Learn Program. Send your papers and get paid.
Contact: support@aglasem.com
aglasem.com